ಕುಂಭಕರ್ಣ ಶಾಪಗ್ರಸ್ತನಾಗಿದ್ದ. ಬರೀ ಆರು ತಿಂಗಳಷ್ಟೇ ಎಚ್ಚರ ತಪ್ಪಿದವರಂತೆ ನಿದ್ದೆಯಲ್ಲಿರುತ್ತಿದ್ದ. ಭರ್ತಿ ಹನ್ನೊಂದು ತಿಂಗಳೂ ಯಾವ ಶಾಪದ ಸಹಾಯವೂ ಇಲ್ಲದೇ ನಿದ್ರಾವಸ್ಥೆಯಲ್ಲಿರೋ ನಾವೇ ಗ್ರೇಟ್! ನಾವೆಲ್ಲರೂ ನವೆಂಬರ್ ಕನ್ನಡಿಗರು!

# ಕುಂಭಕರ್ಣನಿಗಿಂತಲೂ ನಾವೇ ಗ್ರೇಟು!

■ ಲತಾ ಹೆಗಡೆ
ಕಲೆ: ಸಂತೋಷ್ ಸಸಿಹಿತ್ಲು



ನವೆಂಬರ್ ಮಾಸ ಬಂತೆಂದರೆ ಸಾಕು ರಾಜ್ಯ, ರಾಷ್ಟ್ರ, ಅಷ್ಟೇ ಏಕೆ ಜಗತ್ತಿನ ಮೂಲೆಮೂಲೆಯಲ್ಲಿಯೂ ಕನ್ನಡಾಭಿಮಾನ ಜಾಗೃತಗೊಂಡು ಹೊಸ ಸಂಚಲನ ಮೂಡಿಬಿಡುತ್ತದೆ.

ಕನ್ನಡ ರಾಜ್ಯೋತ್ಸವದಿಂದಲೇ ಮಾಸದ ಶುಭಾರಂಭ. ಇದೊಂದು ಉತ್ಸವವೇ ಹೌದು. ವರ್ಷಕ್ಕೊಮ್ಮೆ ಆಚರಿಸುವ ಗಣೇಶ ಚತುರ್ಥಿ, ದಸರಾ, ದೀಪಾವಳಿ ಮುಂತಾದ ಹಬ್ಬಗಳ ಸಾಲಿಗೆ ಇದೂ ಸೇರಿ ಉತ್ಸವದಂತೆಯೇ ಆಚರಿಸಲಾಗುತ್ತದೆ. ಗಾಢನಿದ್ರೆಯಿಂದ ಬಡಿದೆಬ್ಬಿಸಿದವರಂತೆ ಒಮ್ಮೆಲೇ ಜಾಗೃತರಾಗಿ ಮಾತೃಭಾಷೆಯ ಕುರಿತಾಗಿ ಒಂದಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡೋ ಪಾಲ್ಗೊಂಡೋ ಕನ್ನಡ ಭಾಷೆಯ ಹಿರಿಮೆ ಕೊಂಡಾಡಿದರೆ ಅಲ್ಲಿಗೆ ಜವಾಬ್ದಾರಿ ಮುಗಿಯಿತೆಂಬ ನಿರಾಳಭಾವ!

ಅಷ್ಟಾದ ನಂತರ ಮತ್ತೊಂದು ನವೆಂಬರ್ ಬರುವ ತನಕವೂ ಗಾಢ ನಿದ್ರೆಗೆ ಜಾರಿ ಕುಂಭಕರ್ಣನ ವಂಶಜರಾಗಿಬಿಡುವುದುಂಟು. ಪಾಪ! ಅವನೋ ಶಾಪಗ್ರಸ್ತನಾಗಿದ್ದ. ಮತ್ತವ ಬರೀ ಆರು ತಿಂಗಳಷ್ಟೇ ಎಚ್ಚರ ತಪ್ಪಿದವರಂತೆ ಸುಷುಪ್ತಿಯಲ್ಲಿರುತ್ತಿದ್ದ. ಆದರೆ ಭರ್ತಿ ಹನ್ನೊಂದು ತಿಂಗಳೂ ಯಾವ ಶಾಪದ ಸಹಾಯವೂ ಇಲ್ಲದೇ ನಿದ್ರಾವಸ್ಥೆಯಲ್ಲಿರೋ ನಾವೇ ಗ್ರೇಟ್! ನಾವೆಲ್ಲರೂ ನವೆಂಬರ್ ಕನ್ನಡಿಗರೇ ಹೌದು.

ನಮ್ಮ ದಿನನಿತ್ಯದ ಮಾತು, ವ್ಯವಹಾರವೆಲ್ಲವೂ ಕಂಗ್ಲೀಷುಮಯವೇ! ಶುದ್ಧ ಕನ್ನಡದಲ್ಲಿ ಸಂಭಾಷಿಸೋದೇ ಅಸಾಧ್ಯವೆನ್ನಿಸಿಬಿಟ್ಟಿದೆ. ಕಂಗ್ಲೀಷು ಮಾಡೋದೂ ಸಿಂಪಲ್ಲೇ, ಆಂಗ್ಲ ಪದಕ್ಕೆ ಉಕಾರ ಸೇರಿಸಿದರಾಯಿತಷ್ಟೇ. ಮತ್ತವು ಅದೆಷ್ಟು ರೂಢಿಯಾಗ್ಬಿಟ್ಟಿವೆ ಅಂದ್ರೆ ವಿದ್ಯುಚ್ಛಕ್ತಿ ರಸೀದಿ, ನೀರಿನ ರಸೀದಿ, ದ್ವಿಚಕ್ರ ವಾಹನ, ಚತುಷ್ಚಕ್ರ ವಾಹನ, ಅಸಂಖ್ಯ ಚಕ್ರವಾಹನ ಅಥವಾ ಉಗಿಬಂಡಿ ಹೀಗೆಲ್ಲಾ ಹೇಳಿದ್ರೆ ಹೇಗ್ಹೇಗೋ ನಗ್ಬೇಕು ಅನ್ಸುತ್ತೆ. ಮತ್ತದು ಕಷ್ಟವೂ ಹೌದು.

ಕನ್ನಡಾಭಿಮಾನ ಜಾಗೃತವಾಗಿ ಈ ಲೇಖನ ಬರೀತಿದ್ದಾಗಲೇ ಪೊರ್ಕೆಧಾರಿಣಿಯಾದ ತಿಪ್ಪಿ ಎಕ್ಸ್‌ಪ್ರೆಸ್ ರೈಲಿನಂತೇ ಒಳನುಗ್ಗಿದ್ಲು. 'ನಾಳೆ ರೇಶನ್ಕಾರ್ಡು ಮಾಡ್ಸೋಕೆ ಓಯ್ತಿದ್ದೀನಿ ಕಣಕ್ಕಾ. ವತ್ತಾರೆ ಬಿರ್ರನೆದ್ದು ಕೀವ್ನಾಗೆ ನಿಲ್ಬೇಕು, ಅದ್ಕೇ ನಾಳೆ ಕೆಲ್ಸಕ್ಕೆ ಬರಾಕಿಲ್ಲ. ಸ್ವಲ್ಪ ಅಜಸ್ ಮಾಡ್ಕಳಿ' ಚಾಮರ ಸೇವೆ ಶುರು ಹಚ್ಕೊಂಡು ಅಂದಾಗ (ಯಾರಿಗೆ ಅನ್ಬೇಡಿ) ಕೆಲಸದ ಹೊರೆ ನನ್ಮೇಲೇ ಬಿತ್ತಲ್ಲಾ ಅನ್ನೋ ಸಂಕ್ಟಕ್ಕೆ ಅವಳ ಕಾಲೆಳೀಬೇಕೆಂಬ ಬಯಕೆ ಹುಟ್ಕೊಂಬಿಡ್ತು.

'ಲೇ ತಿಪ್ಪವ್ವಾ! ಪಡಿತರ ಚೀಟಿ ಮಾಡ್ಸೋಕೆ ಸುಮ್ಸುಮ್ನೆ ರಜಾ ಯಾಕ್ ಹಾಕ್ತೀಯೇ? ನೀನೇ ಬೈಯ್ಯೋ ಹಾಗೆ ನಿನ್ ದಂಡಪಿಂಡ ಗಂಡನ್ನ ಸರದೀಲಿ ನಿಲ್ಲೋಕೆ ಹೇಳು. ಕೆಲ್ಸ ಮುಗ್ಸಿ ಹೋಗಿ ನಿಂತ್ಕೊಳ್ಳೋವಂತೆ' ಬೇಕೆಂದೇ ಪ್ಯೂರ್ ಕನ್ನಡದಲ್ಲಿ ಹೇಳ್ದೆ.

'ಯಾಕಕ್ಕೋ... ಯೇನೇನೋ ಯೋಳ್ತಿದ್ದೀರಿ? ಕ್ವಾಪ ಬಂದ್ರೆ ತಿಳ್ಯೋ ಅಂಗೇ ಬೈದ್ಬುಡಿ. ಅದ್ಬುಟ್ಟು ಪಡ್ತ್ರ ಗಿಡ್ತ್ರ ಅಂತ ಯಾವ್ಯಾವ್ದೋ ಭಾಸೇಲಿ ಎಂಗೆಂಗೋ ಅಂದು ತೀರಿಸ್ಕೊಬೇಡಿ ಮತ್ತೆ...' ಧಾಟಿಯಲ್ಲಿ ಧಮ್ಕಿಯಿತ್ತೇ? ನೋಡಿದ್ರಾ, ಅಚ್ಚ ಕನ್ನಡದಲ್ಲಿ ಮಾತಾಡಿದ್ದರ ಪ್ರಭಾವ...

ಮೊನ್ನೆ ಪಕ್ಕದ ಮನೇಲಿ ಬಾಡಿಗೇಗಿರೋ ಮೂರು ಕಾಲೇಜು ಹುಡುಗೀರಿಗೆ ಕನ್ನಡದಲ್ಲಿ ಮಾತಾಡುವ ಸ್ಪರ್ಧೆ ಏರ್ಪಡಿಸಿದ್ದೆ. ಬರೀ ಹತ್ತು ನಿಮಿಷ ಅಚ್ಚ ಕನ್ನಡದಲ್ಲಿ ಮಾತಾಡಿದ್ರೆ ಗೆದ್ದವ್ರಿಗೆ ಬಹುಮಾನ ಕೊಡೋದಾಗಿ ಕಮಿಟ್...

ಸಾರಿ! ಮತ್ತದೇ ಬಳಸಿದ್ದಕ್ಕೆ ಕ್ಷಮೆಯಿರ್ಲಿ... ಒಪ್ಕೊಂಬಿಟ್ಟಿದ್ದೆ. ಹೀಗನ್ನೋದು ಕಮಿಟ್ಟಿನಷ್ಟು ಸೂಕ್ತ ಕಾಣ್ತಿಲ್ಲ. ಇರಲಿ ಬಿಡಿ. ಅವರಿಷ್ಟದ ಟಾಪಿಕ್ಕು... ಅಲ್ಲಲ್ಲ! ವಿಷ್ಯದ ಮೇಲೆ ಮಾತಾಡುವಂತೆ ಹೇಳ್ದೆ. ಗೂಗಲ್ಲಿಸಿ ತಂತಮ್ಮ ವಿಷ್ಯಕ್ಕೆ ಕನ್ನಡದ ಪದ ಹುಡುಕಿ ವಾಕ್ಯಗಳನ್ನೂ ಮನನ ಮಾಡ್ಕೊಂಡು ಉತ್ಸಾಹದಿಂದಲೇ ಶುರು ಹಚ್ಕೊಂಡ್ರು.

'ನಾ ಆರಿಸ್ಕೊಂಡಿರೋ ವಿಷ್ಯ (ಕ್ಷಣಕಾಲ ಮೌನ) ದಿನಪತ್ರಿಕೆ. ದಿನ ಪತ್ರಿಕೆಯಿಂದಲೇ ದಿನದ ಶುಭಾರಂಭ ಮಾಡುವವರಿಗೆ ಅದಿಲ್ಲದ ಬೆಳಗನ್ನು ಊಹಿಸೋಕೂ ಆಗಲ್ವೇನೋ. ನಾನೂ ಅಷ್ಟೇ, ಪೇಪರ್ ಹುಡ್ಗ ಯಾವಾಗ ಪೇಪರ್ ಹಾಕ್ತಾನೋ ಅಂತ ಕಾಯ್ತಿರ್ತೀನಿ...' ಅಂದದ್ದೇ ತಡ ನನ್ನನ್ನೂ ಸೇರಿಸಿ ಎಲ್ರೂ ಹೋ ಅಂತ ಅರ್ಚಿದ್ವು. ಜೋಶಲ್ಲಿದ್ದ ಅವಳಿಗೆ ಏನಾಯ್ತು, ಯಾಕೆ ಅಂತಲೇ ಗೊತ್ತಾಗ್ದೇ ಪಿಳಿಪಿಳಿ ಕಣ್ಬಿಟ್ಟು ಕಾಡುಪಾಪ ಆದ್ಲು.

'ನೀ ಸೋತೆ ಕಣೇ... ಪೇಪರ್ ಅನ್ನೋದು (ಅರೆಕ್ಷಣ ಮೌನ) ಆಂಗ್ಲ ಪದ ಅಲ್ವೇನೇ...' ಅಂದೆ. ಇಂಗ್ಲಿಷು ಅನ್ನೋ ಬದಲು ಆಂಗ್ಲ ಅನ್ನೋ ಪದಬಳಕೆ ಮಾಡೋಕೆ ಎಷ್ಟು ಕಷ್ಟಪಟ್ಟೆ ಅನ್ನೋದು ನಂಗ್ಮಾತ್ರ ಗೊತ್ತು. ಅವಳೋ ಮುಖ ಚಿಕ್ಕದು ಮಾಡ್ಕೊಂಡು ಕೂತ್ಲು.

ಎರಡನೇವ್ಳು ಕೈಯಲ್ಲಿ ಮೈಕು ಹಿಡ್ದಂತೇ ನಟಿಸ್ತಾ... ಅರೇ! ನೀವ್ಯಾಕೆ ನಗ್ತಿದ್ದೀರಿ?... ಮೈಕು ಆಂಗ್ಲಪದ ಅಂತಿದ್ದೀರಾ? ಅಷ್ಟಕ್ಕೂ ನಾನೇನೂ ಸ್ಪರ್ಧಾಳು ಅಲ್ಲ.

ಅವಳ ಆತ್ಮವಿಶ್ವಾಸ ನೋಡಿ ಖಂಡಿತಾ ಗೆದ್ದೇ ಗೆಲ್ತಾಳೆ ಅಂದ್ಕೊಂಡೆ. ಅವಳೋ ಹಸ್ತವನ್ನ ಸುರುಳಿಯಂತಾಗಿಸಿ ಬಾಯಿ ಹತ್ರ ಹಿಡ್ಕೊಂಡು ಭಾಷಣಕ್ಕೆ ಸನ್ನದ್ಧಳಾಗಿ ನಿಂತಿದ್ಲು. ಯಾವುದೋ ಧ್ಯಾನದಲ್ಲಿ ನಾನೋ 'ರೆಡೀ... ವನ್, ಟೂ, ಥ್ರೀ... ಸ್ಟಾರ್ಟ್' ಅಂದದ್ದೇ ತಡ ಶೋಡಶಿಯರು ಘೊಳ್ಳೆಂದ್ರು. ಈಗ ಪಿಳ್ಗುಟ್ಟೋದು ನನ್ ಸರದಿಯಾಗಿ ಸಾವರ್ಸಿಕೊಂಡು ನಗ್ತಾ 'ಶುರು ಮಾಡು' ಅಂದೆ.

'ಈ ಚರವಾಣಿ ಮೇಲೆ ಮಾತಾಡೋಕೆ ಇಷ್ಟಪಡ್ತೀನಿ... ಇದಕ್ಕೆ ಜಂಗಮವಾಣಿ ಅಂತ್ಲೂ